ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018.

संस्कृतशिक्षणनिर्देशनालयः
कर्नाटकसंस्कृतविश्वविद्यालयः
पम्पमहाकविमार्गः, चामराजपेटे, बेङ्गलूरु-५६००१८

ದಿನಾಂಕ : 01.06.2013

# ಸಂಸ್ಕೃತ ಪಾಠಶಾಲೆಗಳ 2012-13ನೇ ಸಾಲಿನ ಪರೀಕ್ಷಾ ಫಲಿತಾಂಶ ಮಾಹಿತಿ

ಸಂಸ್ಕೃತ ಪಾಠಶಾಲೆಯಲ್ಲಿ ಪ್ರಥಮಾ ಮೂರು ತರಗತಿಗಳು, ಕಾವ್ಯ ಎರಡು ತರಗತಿಗಳು ಮತ್ತು ಸಾಹಿತ್ಯ ಎರಡು ತರಗತಿಗಳು ಸೇರಿ ಒಟ್ಟು ಏಳು ತರಗತಿಗಳು ನಡೆಯುತ್ತವೆ. ಸಂಸ್ಕೃತ ಪ್ರಥಮಾ ಒಂದು ಮತ್ತು ಎರಡನೆಯ ತರಗತಿ ಸಾಮಾನ್ಯ ಶಿಕ್ಷಣದ ಆರು ಮತ್ತು ಏಳನೆಯ ತರಗತಿಗೆ ಸಮಾನಾಂತರವಾದ ಶಿಕ್ಷಣ. ಕಾವ್ಯ ಒಂದನೆಯ ತರಗತಿ ಸಾಮಾನ್ಯ ಶಿಕ್ಷಣದ ಒಂಭತ್ತನೆಯ ತರಗತಿಗೆ ಸಮಾನಾಂತರವಾದ ಶಿಕ್ಷಣ. ಮತ್ತು ಸಾಹಿತ್ಯ ಒಂದನೆಯ ತರಗತಿ ಪಿಯುಸಿ ಒಂದನೆಯ ವರ್ಷಕ್ಕೆ ಸಮಾನಾಂತರವಾದ ಶಿಕ್ಷಣವಾಗಿರುತ್ತದೆ. ಈ ಮೇಲೆ ತಿಳಿಸಿದ ತರಗತಿಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪಾಠಶಾಲಾ ಹಂತದಲ್ಲಿ ಪರೀಕ್ಷೆಯನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸುತ್ತಾರೆ.

ಈ ಮೇಲ್ಕಂಡ ತರಗತಿಗಳನ್ನು ಹೊರತು ಪಡಿಸಿ ಸಂಸ್ಕೃತ ಪ್ರಥಮಾ ಮೂರನೆಯ ತರಗತಿ ಎಂಟನೆಯ ತರಗತಿಗೆ ಸಮಾನಾಂತರ ಶಿಕ್ಷಣ. ಕಾವ್ಯ ಎರಡನೆಯ ತರಗತಿ ಹತ್ತನೆಯ ತರಗತಿಗೆ ಸಮಾನಾಂತರ ಶಿಕ್ಷಣ. ಹಾಗೂ ಸಾಹಿತ್ಯ ಎರಡನೆಯ ತರಗತಿ ಪಿಯುಸಿ ಎರಡನೆಯ ತರಗತಿಗೆ ಸಮಾನಾಂತರ ಶಿಕ್ಷಣವಾಗಿರುತ್ತದೆ. ಈ ತರಗತಿಗಳ ಪ್ರಸಿದ್ಧ ಪರೀಕ್ಷೆಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲವು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಿ ಫಲಿತಾಂಶವನ್ನು ಪ್ರಕಟಿಸಿರುತ್ತದೆ. 2012-13ನೇ ಸಾಲಿನಲ್ಲಿ ಈ ಕೆಳಕಂಡಂತೆ ವಿದ್ಯಾರ್ಥಿಗಳು ಹಾಜರಾಗಿ ಉತ್ತೀರ್ಣರಾಗಿರುತ್ತಾರೆ.

| ತರಗತಿಗಳು | ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳು | ಪ್ರಥಮ ಶ್ರೇಣಿ | ದ್ವಿತೀಯ ಶ್ರೇಣಿ | ಉತ್ತೀರ್ಣ | ಗೈರುಹಾಜರಿ | ಅನುತ್ತೀರ್ಣ | ಶೇಕಡಾವಾರು ಫಲಿತಾಂಶ |
|---|---|---|---|---|---|---|---|
| ಪ್ರಥಮಾ III ವರ್ಷ | 11659 | 8612 | 1400 | 699 | 85 | 863 | 99.21 |
| ಕಾವ್ಯ II ವರ್ಷ | 5031 | 4064 | 368 | 63 | 94 | 413 | 97.96 |
| ಸಾಹಿತ್ಯ II ವರ್ಷ | 1398 | 821 | 224 | 66 | 87 | 50 | 92.73 |
| ಒಟ್ಟು | 18088 | 13497 | 1992 | 828 | 266 | 1326 | 96.63 |

ಕಾವ್ಯ-29 ವಿದ್ಯಾರ್ಥಿಗಳ, ಸಾಹಿತ್ಯ-150 ವಿದ್ಯಾರ್ಥಿಗಳ ಮಾಹಿತಿ ಕೊರತೆಯಿಂದ ಫಲಿತಾಂಶವನ್ನು ತಡೆ ಹಿಡಿಯಲಾಗಿದೆ.